ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/282ಸಿ/ಇಪಿಆರ್‌ಎಸ್/2022/ಭಾಗ-01/ಕಾನಿವ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:24-04-2023.

ಇವರಿಗೆ,

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ , ಮಂಗಳೂರು , ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಮಾನ್ಯರೆ,

ವಿಷಯ:- 2022-23ನೇ ಸಾಲಿನ ಕಾರ್ಯನಿರ್ವಹಣಾ ವರದಿಯನ್ನು E-parನಲ್ಲಿ ಭರ್ತಿ ಮಾಡಿ ಹಾಗೂ ಆಸ್ತಿ-ಋಣ ಪಟ್ಟಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿರ ಸುಧಾರಣಾ ಇಲಾಖೆ ಇವರ ಆದೇಶ ಸಂಖ್ಯೆ:ಸಿಆಸುಇ 06 ಪಿಎಂಎಸ್ 2023ರ ದಿನಾಂಕ: 03-02-2023ರ ಸರ್ಕಾರ ಪತ್ರ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ "ಎ", "ಬಿ" ಮತ್ತು "ಸಿ" ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು 2022-23ನೇ ಸಾಲಿನ ಕಾರ್ಯನಿರ್ವಹಣಾ ವರದಿಯನ್ನು ದಿನಾಂಕ: 20-05-2023ರ ಒಳಗಾಗಿ E-parನಲ್ಲಿ ಭರ್ತಿ ಮಾಡುವುದು ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ದಿನಾಂಕ: 01-01-2022 ರಿಂದ 31-03-2023ರ ವರೆಗಿನ ಆಸ್ತಿ-ಋಣ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ವ್ಯಾಪ್ತಿಗೆ ಒಳಪಡುವ ಜಂಟಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

ಮುಂದುವರೆದು, 2022-23ನೇ ಸಾಲಿನ ಕಾರ್ಯನಿರ್ವಹಣಾ ವರದಿಯ ಎಲ್ಲಾ ಹಂತಗಳು ಪೂರ್ಣಗೊಂಡ ನಂತರ 09 ಪುಟಗಳ ಇ-ಫಾರ್ ವರದಿಗಳನ್ನು **(ಬೋಧಕ ವರ್ಗದವರು ವಿಷಯವನ್ನು ಪ್ರತ್ಯೇಕವಾಗಿ ನಮೂದಿಸುವುದು, ನಮೂದಿಸದಿದ್ದಲ್ಲಿ ಅಂತಹ ವರದಿಗಳನ್ನು ಪರಿಗಣಿಸಲಾಗುವುದಿಲ್ಲ)** ಹಾಗೂ ಬೋಧಕ/ಬೋಧಕೇತರ ವರ್ಗದವರು ಇ-ಫಾರ್ ವರದಿಯಲ್ಲಿ ಕಾಲೇಜಿನ ಮೊಹರನ್ನು ನಮೂದಿಸಿ ಆಸ್ತಿ-ಋಣ ಪಟ್ಟಿಯ ಪ್ರತಿಯನ್ನು ಸಹ ಕಡ್ಡಾಯವಾಗಿ ಲಗತ್ತಿಸಿ ಕೇಂದ್ರಕಛೇರಿಗೆ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಅಡಕ: ಸರ್ಕಾರದ ಅಧಿಸೂಚನೆ ಪತ್ರ ಮತ್ತು ಆಸ್ತಿ-ಋಣಪಟ್ಟಿಯ ನಮೂನೆ 01 & 02

ಪ್ರತಿಯನ್ನು

1 ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳ, ಅಗತ್ಯ ಕ್ರಮಕ್ಕಾಗಿ.
2 ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3 ರಕ್ಷಕ ಕಡತ.
4 ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 06 ಪಿಎಂಎಸ್ 2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:03.02.2023.

**ಸುತ್ತೋಲೆ**

**ವಿಷಯ:** ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 2023ರ ನಿಯಮ 24ರ ಉಪನಿಯಮ (2)ರ ತಿದ್ದುಪಡಿಯನ್ವಯ –ಆಸ್ತಿ ಹೊಣೆಗಾರಿಕೆ ವಿವರಗಳನ್ನು ಸಲ್ಲಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 24ರ ಉಪನಿಯಮ (2)ಕ್ಕೆ ದಿನಾಂಕ:13.01.2023ರ ಅಧಿಸೂಚನೆ ಸಂಖ್ಯೆ: ಸಿಆಸುಇ 12 ಸೇನಿಸಿ 2022ರಲ್ಲಿ ತಿದ್ದುಪಡಿಯನ್ನು ಮಾಡಲಾಗಿದೆ. ಈ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟವಾದ ದಿನಾಂಕ:13.01.2023ರಿಂದ ಜಾರಿಗೆ ಬಂದಿರುತ್ತದೆ. ಅದರನ್ವಯ ಈ ನಿಯಮಗಳಲ್ಲಿನ ನಿಯಮ 24ರ ಉಪನಿಯಮ (2)ರಲ್ಲಿನ **"ಡಿಸೆಂಬರ್-31ಕ್ಕೆ"** ಎಂಬ ಪದ ಮತ್ತು ಅಂಕಿಗಳ ಬದಲಾಗಿ **"ಮಾರ್ಚ್ - 31ಕ್ಕೆ"** ಎಂಬ ಪದ ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸಿ ಆದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಈ ಹಿಂದಿನ ದಿನಾಂಕ:21.01.2021ರ ಸುತ್ತೋಲೆ ಸಂಖ್ಯೆ: ಸಿಆಸುಇ 05 ಪಿಎಂಎಸ್ 2021ರನ್ವಯ, ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್ ಎ/ಬಿ/ಸಿ/ಡಿ ವರ್ಗದ ಎಲ್ಲಾ ಅಧಿಕಾರಿ/ನೌಕರರು ತಮ್ಮ ಚರ/ಸ್ಥಿರಾಸ್ತಿ ವಿವರಗಳ ಬಗ್ಗೆ ಪ್ರತಿ ವರ್ಷದ ಡಿಸೆಂಬರ್-31ರ ಅಂತ್ಯಕ್ಕೆ (ಕ್ಯಾಲೆಂಡರ್ ವರ್ಷ) ಇದ್ದಂತೆ ಸಲ್ಲಿಸುತ್ತಿದ್ದ ವಿವರಗಳನ್ನು ಇನ್ನು ಮುಂದೆ ಮಾರ್ಚ್-31ರ ಅಂತ್ಯಕ್ಕೆ (ಆರ್ಥಿಕ ವರ್ಷ) ಇದ್ದಂತೆ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ, ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಇಲಾಖೆಗಳ ಮೇಲಾಧಿಕಾರಿಗಳ ಮುಖಾಂತರ ಸರ್ಕಾರದ ಅಧೀನ ಕಾರ್ಯದರ್ಶಿ ಸಿಆಸುಇ (ಸಿಬ್ಬಂದಿ/(ಸೇವೆಗಳು-6) ಇವರಿಗೆ ಸಲ್ಲಿಸತಕ್ಕದ್ದು.

ಮುಂದುವರೆದು, ದಿನಾಂಕ:01.01.2022 ರಿಂದ 31.12.2022ರ ಅಂತ್ಯಕ್ಕೆ ಸಲ್ಲಿಸಬೇಕಾಗಿದ್ದ ಆಸ್ತಿ ಹೊಣೆಗಾರಿಕೆ ತಃಖ್ತೆಗಳ ವಿವರಗಳನ್ನು, ಒಂದು ಬಾರಿಯ ಕ್ರಮವಾಗಿ ದಿನಾಂಕ:01.01.2022 ರಿಂದ 31.03.2023ರ ಅಂತ್ಯಕ್ಕೆ, ಒಟ್ಟು 15 ತಿಂಗಳುಗಳ ವಿವರಗಳನ್ನು ಏಪ್ರಿಲ್-2023ರ ಮಾಹೆಯಲ್ಲಿ ಸಲ್ಲಿಸುವಂತೆ ಹಾಗೂ ಮುಂದಿನ ಸಾಲುಗಳ ಆಸ್ತಿ ಹೊಣೆಗಾರಿಕೆ ವಿವರಗಳನ್ನು ಪ್ರತಿ ಹನ್ನೆರಡು ತಿಂಗಳಿಗೊಮ್ಮೆ ಆಯಾ ಆರ್ಥಿಕ ವರ್ಷದ 01ನೇ ಏಪ್ರಿಲ್ ಮಾಹೆಯಿಂದ ಮಾರ್ಚ್-31ರವರ ಅಂತ್ಯಕ್ಕೆ ವಿಳಂಬವಿಲ್ಲದೆ ಸಕಾಲದಲ್ಲಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

**(ಗಾಯತ್ರಿ ಜಿ.ಎನ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸಿಬ್ಬಂದಿ).

**ಇವರಿಗೆ:**

1. ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ /ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು.
2. ಎಲ್ಲಾ ಇಲಾಖೆಗಳ ಸರ್ಕಾರದ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
3. ಎಲ್ಲಾ ಇಲಾಖೆಗಳ ಒ&ಎಂ ಅಧಿಕಾರಿಗಳು, ಈ ಸುತ್ತೋಲೆಯ ಮಾಹಿತಿಯನ್ನು ಎಲ್ಲಾ ಅಧಿಕಾರಿ/ ನೌಕರರ ಗಮನಕ್ಕೆ ತರುವ ಸಲುವಾಗಿ.
4. ಸೂಚನಾ ಫಲಕ.
5. ರಕ್ಷಾ ಕಡತ ಹಾಗೂ ಹೆಚ್ಚುವರಿ ಪ್ರತಿಗಳು.

ಕಾಲೇಜಿನ ಹೆಸರು:
ವಿಷಯ :

## ನಮೂನೆ–1

## ಕರ್ನಾಟಕ ಸರ್ಕಾರ

(ಅಧಿಕೃತಜ್ಞಾಪನ ಸಂಖ್ಯೆ:ಸಿಆಸುಇ/11/ಸೇನಿಸಿ/92, ದಿನಾಂಕ:26.04.1994)
ದಿನಾಂಕ:01–01–2022 ರಿಂದ 31-03-2023 ರವರೆಗೆ ವರ್ಷಾಂತ್ಯಕ್ಕೆ ಸ್ಥಿರಾಸ್ತಿಗಳ ವಿವರಣೆಯನ್ನುತೋರಿಸುವ ಪಟ್ಟಿ)

1. ಅಧಿಕಾರಿ/ನೌಕರನ ಹೆಸರು :
(ಪೂರ್ಣ ಹೆಸರು ಮತ್ತುಯಾವ ಸೇವೆಗೆ ಸೇರಿದವರಾಗಿರುತ್ತಾರೆ)
2. ಧಾರಣೆ ಮಾಡಿದ ಹುದ್ದೆ :
3. ಈಗಿನ ವೇತನ :

| ಕ್ರ.ಸಂ. | ಸ್ಥಿರಾಸ್ತಿಯು ಇರುವ ಸ್ಥಳ, ಜಿಲ್ಲೆಯ ಹೆಸರು, ಉಪ ವಿಭಾಗ, ತಾಲ್ಲೂಕು, ಗ್ರಾಮ | ಭೂಮಿ/ಮನೆ ಮತ್ತುಇತರ ಕಟ್ಟಡಗಳ ಹೆಸರು ಮತ್ತು ವಿವರಣೆಕೊಟ್ಟಕ್ರಯ | ಈಗಿನ ಮೌಲ್ಯಮಾಪನ (ಅಂದಾಜು) | ಅಧಿಕಾರಿಯ/ಸರ್ಕಾರಿ ನೌಕರನ ಹೆಸರಿನಲ್ಲಿರದಿದ್ದರೆ, ಯಾರ ಹೆಸರಿನಲ್ಲಿದೆ ಮತ್ತುಅಧಿಕಾರಿ/ನೌಕರನ ಸಂಬಂಧ | ಅರ್ಜಿಸಿದ ವಿಧಾನ, ಖರೀದಿಸಿದ/ಗುತ್ತಿಗೆ/ಅಡಮಾನ/ ಪಿತ್ರಾರ್ಜಿತ, ಕಾಣಿಕೆ, ಅಥವಾಅನ್ಯತಾ ಅರ್ಜಿಸಿದ ದಿನಾಂಕ | ಈ ಆಸ್ತಿಯಿಂದ ವಾರ್ಷಿಕ ಆದಾಯ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ಸಹಿ:
ಪದನಾಮ:

ಕಾಲೇಜಿನ ಹೆಸರು:

ವಿಷಯ :

## ನಮೂನೆ–2

## ಕರ್ನಾಟಕ ಸರ್ಕಾರ

ದಿನಾಂಕ:01–01–2022 ರಿಂದ 31-03-2023 ರವರೆಗೆ ವರ್ಷಾಂತ್ಯಕ್ಕೆ ಚರಾಸ್ತಿಗಳ ವಿವರಣೆಯನ್ನುತೋರಿಸುವ ಪಟ್ಟಿ

1. ಅಧಿಕಾರಿ/ನೌಕರನ ಹೆಸರು :
2. ಧಾರಣೆ ಮಾಡಿದ ಹುದ್ದೆ :
3. ಈಗಿನ ವೇತನ :

| ಕ್ರ.ಸಂ. | ಚರಾಸ್ತಿಗಳ ವಿವರಣೆ, ಬ್ಯಾಂಕು/ಅಂಚೆ ಕಛೇರಿಯಲ್ಲಿರುವ ಖಾತೆಗಳು/ಸ್ಟಾಕ್/ಷೇರು ಮತ್ತುಡಿಬೆಂಚರು ಇತ್ಯಾದಿಗಳು | ಚರಾಸ್ತಿಯ ಬೆಲೆ | ಖರೀದಿಸಿದ/ವಿಲೇ ಮಾಡಿದ ದಿನಾಂಕ | ಕಲಂ–2ರಲ್ಲಿನ ಉಲ್ಲೇಖಿಸಿದ ಚರಾಸ್ತಿಯನ್ನು ಖರೀದಿಸಲು ಇದ್ದಆದಾಯದ ಮೂಲಗಳು | ಅರ್ಜಿಸಿದ ಚರಾಸ್ತಿಯನ್ನು ಸರ್ಕಾರಕ್ಕೆ ವರದಿ ಮಾಡಿದ ದಿನಾಂದ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ಸಹಿ:

ಪದನಾಮ: